ರೈತರ ಸಾಲ ಮನ್ನಾ

245(32) ಶ್ರೀ ಬೋಪಯ್ಯ ಕೆ.ಜಿ.

1) 2012–13 ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಸಹಕಾರ ಸಂಘಗಳಿಂದ ಸಾಲ ಪಡೆದವರ ಸಂಖ್ಯೆ ಎಷ್ಟು; ತಾಲ್ಲೂಕುವಾರು ವಿವರಗಳನ್ನು ನೀಡುವುದು; ಸರ್ಕಾರದಿಂದ ಈವರೆಗೆ ಎಷ್ಟು ಮೊತ್ತವನ್ನು ಸಹಕಾರ ಸಂಘಗಳಿಗೆ ನೀಡಲಾಗಿದೆ; ವಿವರ ಒದಗಿಸುವುದು; ಸಾಲ ಮನ್ನಾ ಯೋಜನೆಯ ಅನ್ವಯ ಇನ್ನೂ ಎಷ್ಟು ಮೊತ್ತ ಕೊಡಲು ಬಾಕಿ ಇದೆ; ಹಾಗಿದ್ದಲ್ಲಿ, ಯಾವಾಗ ಮರುಪಾವತಿಸಲಾಗುವುದು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು)

1) 2012–13ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಸಹಕಾರ ಸಂಘಗಳಿದ 32153 ರೈತರು ಕೃಷಿ ಸಾಲ ಪಡೆದಿರುತ್ತಾರೆ. ಸಾಲ ಪಡೆದ ರೈತರ ತಾಲ್ಲೂಕುವಾರು ವಿವರವನ್ನು ಈ ಕೆಳಗೆ ನೀಡಲಾಗಿದೆ.

(` ಲಕ್ಷಗಳಲ್ಲಿ)

ಕ್ರ. ಸಂ.	ತಾಲ್ಲೂಕಿನ ಹೆಸರು	ಸಾಲ ಪಡೆದ ರೈತರ ಸಂಖ್ಯೆ	ಸಾಲದ ಮೊತ್ತ
1	ಮಡಿಕೇರಿ	9003	8855.95
2	ಸೋಮವಾರಪೇಟೆ	9967	9804.95
3	ವಿರಾಜಪೇಟೆ	13183	12967.63
	ಜಮ್ಮ	32153	31628.38

ಕೊಡಗು ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ 2013–14 ನೇ ಸಾಲಿನಲ್ಲಿ ಬಡ್ಡಿ ರಿಯಾಯಿತಿ ಯೋಜನೆಯಡಿಯಲ್ಲಿ ` 4426.95 ಲಕ್ಷ ಮತ್ತು ಸಾಲ ಮನ್ನಾ ಯೋಜನೆಯಡಿಯಲ್ಲಿ ` 7049.38 ಲಕ್ಷಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

ಸಾಲ ಮನ್ನಾ ಯೋಜನೆಯಡಿಯಲ್ಲಿ ಡಿಸಿಸಿ ಬ್ಯಾಂಕು 2013–14ನೇ ಸಾಲಿನಲ್ಲಿ ಸಲ್ಲಿಸಲಾಗಿದ್ದ ಕ್ಲೇಂ ಬಿಲ್ಲಿನ ಮೊತ್ತ ` 7049.38 ಲಕ್ಷ ಪೂರ್ತಿಯಾಗಿ ಬಿಡುಗಡೆಯಾಗಿರುತ್ತದೆ. ಮಾರ್ಚ್ 2014 ರ ಅಂತ್ಯಕ್ಕೆ ಹೆಚ್ಚುವರಿಯಾಗಿ ಸಲ್ಲಿಸಲಾದ ` 6.29 ಲಕ್ಷ ಕ್ಲೇಂ ಮಾತ್ರ ಬಿಡುಗಡೆ ಮಾಡಲು ಪರಿಶೀಲನೆ ಹಂತದಲ್ಲಿರುತ್ತದೆ.

ಮೊರಾರ್ಜಿ ವಸತಿ ಶಾಲೆಗೆ ಸ್ವಂತ ಕಟ್ಟಡ ಮಂಜೂರಾತಿ

246(33); ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ)

ಅ) ಕೊಡಗು ಜಿಲ್ಲೆ ವಿರಾಜಪೇಟೆಯಲ್ಲಿರುವ ಅಲ್ಪಸಂಖ್ಯಾತ ಮೊರಾರ್ಜಿ ವಸತಿ ಶಾಲೆಗೆ ಸ್ವಂತ ಕಟ್ಟಡ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಟ್ಟಡ ಕಟ್ಟಲು ಜಮೀನು ಗುರುತಿಸಿದ್ದರೂ ಕಾಮಗಾರಿ ಪ್ರಾರಂಭಿಸದೆ ಇರಲು ಕಾರಣವೇನು; ವಿವರಗಳನ್ನು ಒದಗಿಸುವುದು?

ಡಾ॥ ಖಮರುಲ್ ಇಸ್ಲಾಂ (ಮಾನ್ಯ ಹಜ್ ಮತ್ತು ವಕ್ಫ್ ಹಾಗೂ ಕೃಷಿ ಮಾರುಕಟ್ಟೆ ಸಚಿವರು)

ಅ) ಈ ವಸತಿ ಶಾಲಾ ನಿರ್ಮಾಣ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸುವ ಹಂತದಲ್ಲಿ ಕೇಂದ್ರ ಚುನಾವಣಾ ನೀತಿ ಸಂಹಿತೆಯು ಜಾರಿಯಲ್ಲಿದ್ದುದರಿಂದ ವಿಳಂಬವಾಗಿದ್ದು, ಈಗ ಟೆಂಡರ್ ಪ್ರಕ್ರಿಯೆಯನ್ನು ಅಂತಿಮಗೊಳಿಸಲಾಗಿದ್ದು, ಕಾಮಗಾರಿಯ ಕಾರ್ಯಾದೇಶವನ್ನು ನೀಡುವ ಕಾರ್ಯ ಪ್ರಗತಿಯಲ್ಲಿದೆ.

ಕಬ್ಬು ಬೆಳೆಗಾರರಿಗೆ ವಂಚನೆ

247(585); ಶ್ರೀ ಎನ್ ಚೆಲುವರಾಯಸ್ವಾಮಿ (ನಾಗಮಂಗಲ)

1) ಕೊಪ್ಪದ ಎನ್.ಎಸ್.ಎಲ್. ಸಕ್ಕರೆ ಕಾರ್ಖಾನೆಯು ರೈತರಿಗೆ ಒಂದು ಟನ್ ಕಬ್ಬಿಗೆ 2400 ರೂ. ನೀಡಬೇಕಾಗಿದ್ದು, ಅದರ ಬದಲು ಒಂದು ಟನ್ ಕಬ್ಬಿಗೆ 2100 ರೂ. ಗಳನ್ನು ಮಾತ್ರ ನೀಡಿ ವಂಚನೆ